ಸಿ.ಸಿ .ನಂ.109/2023 ಪಿಡಬ್ಲೂಃ 1

ದಿನಾಂಕಃ 09-01-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀಮತಿ ಆರ್ ಜಿ ಎನ್ ವಕೀಲರಿಂದಃ**

4. ನಾನು ಫಿರ್ಯಾದು ಸಂಸ್ಥೆಯಲ್ಲಿ ಕಳೆದ 15 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ. ಆರೋಪಿಗೆ ಸಾಲವನ್ನು ನೀಡುವಾಗ ನಾನು ಫಿರ್ಯಾದಿ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ. ಆರೋಪಿ ನಮ್ಮ ಬ್ಯಾಂಕಿಗೆ ಬಂದ ದಿನಾಂಕ ನೆನಪಿಲ್ಲ . ಆರೋಪಿ ಮೊದಲಿನಿಂದ ನಮ್ಮ ಬ್ಯಾಂಕ್ ಜೊತೆ ವ್ಯವಹಾರ ಮಾಡುತ್ತಿದ್ದರು. ಆರೋಪಿ ಮೊದಲು ಬಂಗಾರ ಅಡವಿಟ್ಟು ಸಾಲವನ್ನು ಪಡೆದಿದ್ದರು . ಆಡಳಿತ ಮಂಡಳಿ ಒಂದು ರೇಟ್ ನ್ನು ಫಿಕ್ಸ ಮಾಡಿರುತ್ತಾರೆ. ಬಂಗಾರದ ಮೌಲ್ಯದ ಶೇಕಡ 75 ರಷ್ಟು ಸಾಲವನ್ನು ಕೊಡುತ್ತಾರೆ. ಸಾಲ ಕಟ್ ಬಾಕಿಯಾದಾಗ ಬಂಗಾರವನ್ನು ಹರಾಜು ಮಾಡಿ ಅದರಿಂದ ಬಂದ ಹಣದಿಂದ ಸಾಲದ ಹಣವನ್ನು ಚುಕ್ತಾ ಮಾಡಿಕೊಳ್ಳುತ್ತೇವೆ ಎಂದರೆ ಸಾಕ್ಷಿ ಬಂಗಾರದ ಸಾಲಕ್ಕೂ ಈ ಸಾಲಕ್ಕೂ ಸಂಬಂಧವಿಲ್ಲ ಎಂದು ನುಡಿದಿರುತ್ತಾರೆ . ಆರೋಪಿ ಮಾಡಿರುವ ಹಳೇಯ ಸಾಲಗಳು ಚುಕ್ತಾ ಆಗಿವೆ ಎಂದರೆ ಸರಿ . ಈ ಕೇಸಿನಲ್ಲಿ ಕೊಟ್ಟಿರುವ ಸಾಲ ವ್ಯವಹಾರಕ್ಕಾಗಿ ಕೊಟ್ಟ ಸಾಲ . ಆರೋಪಿ ಬಂಗಾರದ ಕೆಲಸ ಮಾಡುತ್ತಿದ್ದರು . ಆ ಉದ್ದೇಶಕ್ಕೆ ಸಾಲವನ್ನು ಪಡೆದಿರುತ್ತಾರೆ . ಆರೋಪಿ ಮನೆಯಲ್ಲಿ ಬಂಗಾರದ ಆಭರಣದ ಕೆಲಸ ಮಾಡುತ್ತಿದ್ದರು. ಅವರು ಬಂಗಾರದ ಆಭರಣದ ಕೆಲಸ ಮಾಡುತ್ತಿದ್ದರು ಎಂಬ ಬಗ್ಗೆ ನಾವು ಅವರಿಂದ ಯಾವುದೇ ದಾಖಲಾತಿ ಪಡೆದಿಲ್ಲ. ಸಾಲವನ್ನು ನೀಡುವಾಗ ಎರಡು ಜಾಮೀನನ್ನು ಪಡೆದಿದ್ದೇವೆ .ಸಾಲ ಕೋರಿ ಆರೋಪಿ ಅರ್ಜಿಯನ್ನು ಹಾಕಿದ್ದರು. ಅರ್ಜಿಯನ್ನು ಹಾಕಿದ ಒಂದು ವಾರದಲ್ಲಿ ಸಾಲ ಮಂಜೂರು ಮಾಡುತ್ತೇವೆ. ಸಾಲವನ್ನು ಆಡಳಿತ ಮಂಡಳಿಯವರು ಮಂಜೂರು ಮಾಡುತ್ತಾರೆ . ಆಡಳಿತ ಮಂಡಳಿಯವರು ಮಂಜೂರು ಮಾಡಿದ ನಂತರ ನಾವು ಜಾಮೀನನ್ನು ಪಡೆದು ಸಾಲವನ್ನು ಕೊಡುತ್ತೇವೆ . ಜಾಮೀನುದಾರರಿಂದ ಅವರ ಆಧಾರ ಕಾರ್ಡ ಹಾಗೂ ಫೋಟೋ ತೆಗೆದುಕೊಳ್ಳುತ್ತೇವೆ . ಈ ಆರೋಪಿತನಿಗೆ ನೀಡಿದ ಇದು ಮೊದಲನೇ ಸಾಲ ಎಂದರೆ ಸರಿ . ಆರೋಪಿಯು ಒಂದು ಲಕ್ಷ ರೂಪಾಯಿ

ಸಾಲ ಕೇಳಿ ಅರ್ಜಿಯನ್ನು ಸಲ್ಲಿಸಿದ್ದರು. ಮಹೇಶ ಗಣಪತಿ ಶೇಟ್ , ವೀಣಾ ಮಹೇಶ ಶೇಟ್ ಹಾಗೂ ನಾಗರಾಜ ಗೋವಿಂದ ಶೇಟ್ ರವರು ಜಾಮೀನುದಾರರಾಗಿರುತ್ತಾರೆ . ಮಹೇಶ ಆರೋಪಿಯ ಸಹೋದರ ಹಾಗೂ ವೀಣಾ ಆರೋಪಿಯ ಸಹೋದರನ ಹೆಂಡತಿ ಎಂದರೆ ಸರಿ . ಆರೋಪಿಯನ್ನು ಜಾಮೀನಾಗಿ ಪಡೆದು ಮಹೇಶ ಹಾಗೂ ವೀಣಾರವರಿಗೂ ಕೂಡ ಸಾಲವನ್ನು ಕೊಟ್ಟಿದ್ದೇವೆ ಎಂದರೆ ಸರಿ . ಬೈಲಾ ಪ್ರಕಾರ ಸಾಲಗಾರರ ಜಾಮೀನುದಾರರಿಗೆ ಹಾಗೂ ಜಾಮೀನುದಾರರ ಸಾಲಗಾರರಿಗೆ ಸಾಲವನ್ನು ನೀಡುವುದು ಕಾನೂನುಬಾಹಿರ ಎಂದರೆ ಸರಿಯಲ್ಲ . ಜಾಮೀನುದಾರರು ಸಾಲಗಾರರಾಗಿರುತ್ತಾರೆ . ಅವರ ಸಾಲ ಕೂಡ ಬಾಕಿ ಇರುತ್ತದೆ, ಕಾರಣ ಸಾಲ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ಆರೋಪಿತನ ವಿರುದ್ಧ ಅಮಲಜಾರಿ ಪ್ರಕರಣ ಮಾಡಿದ್ದೇವೆ . ಅಮಲ ಜಾರಿ ಪ್ರಕರಣಲ್ಲಿ ಆರೋಪಿ ಪ್ರತಿ ವಾಯ್ದೆಗೂ ಹಣವನ್ನು ತುಂಬುತ್ತಾರೆ ಎಂದರೆ ಸರಿಯಲ್ಲ . ಆ ರೀತಿ ಹಣವನ್ನು ತುಂಬುತ್ತಿದ್ದರೂ ಕೂಡ ಆರೋಪಿತನ ವಿರುದ್ಧ ಈ ರೀತಿ ಸುಳ್ಳು ಕೇಸನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ.

5. ಆರೋಪಿ ಬ್ಯಾಂಕಿಗೆ ಬಂದು ದಿಃ 16-10-2021 ರಂದು ಚೆಕ್ ನ್ನು ಕೊಟ್ಟಿರುತ್ತಾರೆ. ಇಷ್ಟು ಸಾಲದ ಹಣ ಬಾಕಿ ಇದೆ , ಬಂದು ಕಟ್ಟಿ ಎಂದು ಆರೋಪಿಗೆ ನೋಟಿಸನ್ನು ನೀಡಿದ್ದೆವು ಹಾಗೂ ಮೌಖಿಕವಾಗಿ ಮನೆಯ ಬಳಿ ಹೋಗಿ ತಿಳಿಸಿದ್ದೆವು . ಆ ನೋಟಿಸು ಕಾಪಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ಆ ನೋಟಿಸಿನಲ್ಲಿ ಇಂತಿಷ್ಟು ಹಣ ತುಂಬುವುದು ಬಾಕಿ ಇದೆ ಎಂದು ಬರೆದಿದ್ದೇವೆ ಎಂದರೆ ಸರಿ . ಸಾಲದ ಅರ್ಜಿ , ಸಾಲದ ಕರಾರು , ನಮ್ಮ ಬ್ಯಾಂಕಿನ ದಾಖಲಾತಿಗಳನ್ನು ನಮ್ಮ ಸಿಬ್ಬಂದಿಗಳು ಭರ್ತಿ ಮಾಡಿರುತ್ತಾರೆ . ಆರೋಪಿಯು ಇಂತಿಷ್ಟು ಹಣ ತುಂಬಬೇಕಾಗಿದೆ ಎಂದು ತೋರಿಸಲು ಸ್ಟೇಟ್ ಮೆಂಟ್ ಹಾಜರು ಪಡಿಸಿದ್ದೇವೆ . ಸಾಲವನ್ನು ಪಡೆದುಕೊಂಡ ನಂತರ ಆರೋಪಿ ಎಷ್ಟು ಹಣ ಕಟ್ಟಿದ್ದಾರೆ ನೆನಪಿಲ್ಲ, ಸ್ಟೇಟ್ ಮೆಂಟ್ ನೋಡಿ ಹೇಳಬೇಕು. ಸ್ಟೇಟ್ ಮೆಂಟ್ ನಲ್ಲಿ ಒಂದು ಲಕ್ಷ ರೂಪಾಯಿ ಬಾಕಿ ತೋರಿಸಲಾಗಿದೆ. ಆರೋಪಿ ಯಾವುದೇ ಹಣವನ್ನು ಕಟ್ಟಿಲ್ಲ . ಸದರಿ ಸಾಲದ ಮೊತ್ತದಿಂದ ಎಫ್ ಡಿ ಇಟ್ಟುಕೊಂಡಿಲ್ಲ . ಆರೋಪಿಗೆ ಸಾಲದ ಹಣವನ್ನು ಅವರ ಉಳಿತಾಯ

ಪಿಡಬ್ಲೂಃ 1

ಖಾತೆಗೆ ವರ್ಗಾವಣೆ ಮಾಡಿರುತ್ತೇವೆ . ಆರೋಪಿಯ ಉಳಿತಾಯ ಖಾತೆಯ ಪಾಸ್ ಬುಕ್ ಹಾಜರು ಪಡಿಸಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.